ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾಯದಂಡಾಧಿಕಾರಿಯವರ ನ್ಯಾಯಾಲಯ, ಪೊನ್ನಂಪೇಟೆ.

## ಕ್ರಿಮಿನಲ್ ಮೊಕದ್ದಮೆ ಸಂಖ್ಯೆ 907 /2019 .

ಪ್ರಾ.ಸಾ. : 6
ಚಾ.ಸಾ. : 11

| | |
|---|---|
| ಹೆಸರು | : ವಿನೋದ್ ಕುಮಾರ್ |
| ತಂದೆಯ ಹೆಸರು | : ಕುನ್ ಜಿ ರಾಮನ್ |
| ವಯಸ್ಸು | : 55 ವರ್ಷ |
| ಉದ್ಯೋಗ | : ಗೋಲ್ಡ್ ಸ್ಮಿತ್ ಕೆಲಸ |
| ವಿಳಾಸ | : ಕೇರಳ |

... ........................................................................................................ ...

ದಿನಾಂಕ 18 ನೇ ಡಿಸೆಂಬರ್ 2023 ರಂದು ಸಾಕ್ಷಿಯನ್ನು ಕರೆಸಲಾಯಿತು ಮತ್ತು ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ- ಮಾನ್ಯ ಸ ಸ ಅ ರವರಿಂದ : -

ಸಾಕ್ಷಿಯು ಮಲೆಯಾಳಂ ಭಾಷೆ ಬಲ್ಲವರಾಗಿದ್ದು ಅವರಿಗೆ ಕನ್ನಡ ಓದಲು ಬರೆಯಲು ಬರದ ಕಾರಣ, ಮಲೆಯಾಳಂ ಮತ್ತು ಕನ್ನಡ ಭಾಷೆ ಗೊತ್ತಿರುವಂತಹ ಶ್ರೀಮತಿ ಪಿ ಹೆಚ್ ಆರ್ ವಕೀಲರು, ಪೊನ್ನಂಪೇಟೆ ರವರನ್ನು ಸಾಕ್ಷಿದಾರರ ಹೇಳಿಕೆಯನ್ನು ದಾಖಲುಮಾಡಿಕೊಳ್ಳಲು ತರ್ಜುಮೆದಾರರಾಗಿ ನೇಮಕ ಮಾಡಿಕೊಳ್ಳಲಾಯಿತು ಹಾಗು ತರ್ಜುಮೆದಾರರಿಗೆ ಪ್ರಮಾಣ ವಚನ ಭೋದಿಸಲಾಯಿತು.

ನಾನು ಕೆನರಾ ಬ್ಯಾಂಕ್ ಕುಟ್ಟ ದಲ್ಲಿ ಗೋಲ್ಡ್ ಸ್ಮಿತ್ ಆಗಿ ಕೆಲಸ ಮಾಡುತ್ತಿದ್ದೇನೆ. ದಿ. 09.09.2019 ರಂದು ಕುಟ್ಟ ಪೊಲೀಸರು ಕೆನರಾ ಬ್ಯಾಂಕ್ ನಲ್ಲಿ 140 ಗ್ರಾಂ ಚಿನ್ನದ ಆಭರಣಗಳನ್ನು ತಂದು ಹಾಜರುಪಡಿಸಿದರು ಅದನ್ನು ನಾನು ಪರಿಶೀಲಿಸಿರುತ್ತೇನೆ. 63 ಗ್ರಾಂ ಬೆಳ್ಳಿಯ ಆಭರಣಗಳನ್ನು ತಂದು ಹಾಜರುಪಡಿಸಿದರು ಅದನ್ನು ನಾನು ಪರಿಶೀಲಿಸಿರುತ್ತೇನೆ. ಚಿನ್ನದ 18 ಗ್ರಾಂ ಗಟ್ಟಿಯನ್ನು ಹಾಜರುಪಡಿಸಿದರು ಅದನ್ನು ಸಹ ನಾನು ಪರಿಶೀಲಿಸಿರುತ್ತೇನೆ. ಈ ಬಗ್ಗೆ ವರದಿ ನೀಡಿರುತ್ತೇನೆ.

ಮತ್ತೊಂದು ದಿನ ಕುಟ್ಟ ಪೊಲೀಸರು ಕೆನರಾ ಬ್ಯಾಂಕ್ ನಲ್ಲಿ 12 ಗ್ರಾಂ ಚಿನ್ನದ ಸರವನ್ನು ತಂದು ಹಾಜರುಪಡಿಸಿದರು ಅದನ್ನು ನಾನು ಪರಿಶೀಲಿಸಿರುತ್ತೇನೆ. ಈ ಬಗ್ಗೆ ವರದಿ ನೀಡಿರುತ್ತೇನೆ.

ಸದರಿ ವರದಿಗಳನ್ನು ನಿ ಪಿ 37 ಎಂದು, ಸಾಕ್ಷಿ ಸಹಿಯನ್ನು ನಿ ಪಿ 37 ಎ ಎಂದು, ಸದರಿ ವರದಿಗಳನ್ನು ನಿ ಪಿ 38 ಎಂದು, ಸಾಕ್ಷಿ ಸಹಿಯನ್ನು ನಿ ಪಿ 38 ಎ ಎಂದು, ಸದರಿ ವರದಿಗಳನ್ನು ನಿ ಪಿ 39 ಎಂದು, ಸಾಕ್ಷಿ ಸಹಿಯನ್ನು ನಿ ಪಿ 39 ಎ ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಸ.ಸ.ಅ.ರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸುವಂತೆ ಕೋರಿಕೊಂಡ ಮೇರೆಗೆ ದಾಖಲೆಗಳನ್ನು ಪರಿಶೀಲಿಸಿ ಹಾಗೂ ಸ.ಸ.ಅ.ರವರ ವಾದವನ್ನು ಆಲಿಸಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅವಕಾಶ ನೀಡಲಾಯಿತು.)

<u>ಪಾಟೀ ಸವಾಲು: - ಮಾನ್ಯ ಸ ಸ ಅ ರವರಿಂದ</u> : -

ದಿ. 11.09.2019 ರಂದು ಕುಟ್ಟ ಪೊಲೀಸರು ಗೋಣಿಕೊಪ್ಪದ ಗುಜರಿ ಅಂಗಡಿಯಲ್ಲಿ ಚಿನ್ನದ ಸರವನ್ನು ಹಾಜರುಪಸಿಡಿದರು ಎಂದರೆ ಸರಿಯಲ್ಲ. ಆಗ ನಾನು ಪರಿಶೀಲಿಸಿ ವರದಿ ನೀಡಿದ್ದೇನೆ ಎಂದರೆ ಕೆನರಾ ಬ್ಯಾಂಕ್ ನಲ್ಲಿ ನೀಡಿದ್ದೇನೆ ಎನ್ನುತ್ತಾರೆ.

<u>ಪಾಟೀ ಸವಾಲು</u> :- ಅರೋಪಿ ಪರ ವಕೀಲರವರಿಂದ :-

ಕನ್ನಡ ಓದಲು ಬರೆಯಲು ಬರುವುದಿಲ್ಲ ಎಂದರೆ ಸರಿಯಲ್ಲ. ಪೊಲೀಸರು ಏನು ಬರೆದಿದ್ದಾರೆ ಎಂದು ನನಗೆ ಗೊತ್ತಿಲ್ಲ ಅವರು ಹೇಳಿದ ಕಡೆ ಸಹಿ ಮಾಡಿದ್ದೇನೆ ಎಂದರೆ ಸರಿ. ನಾನು ಚಿನ್ನ ಮತ್ತು ಬೆಳ್ಳಿಯನ್ನು ಪರಿಶೀಲಿಸದೆ ವರಿದಿ ನೀಡಿದ್ದೇನೆ ಎಂದರೆ ಸರಿಯಲ್ಲ. ಪೊಲೀಸರು ನನಗೆ ಲಿಖಿತವಾಗಿ ಚಿನ್ನ ಮತ್ತು ಬೆಳ್ಳಿಯನ್ನು ಪರಿಶೀಲಿಸಲು ಮನವಿ ನೀಡಿಲ್ಲ ಎಂದರೆ ಸರಿ. ನನಗೆ ಚಿನ್ನ ಮತ್ತು ಬೆಳ್ಳಿಯನ್ನು ಪರಿಶೀಲಿಸಲು ತಿಳಿಸಿದಾಗ ಯಾವುದೇ ಮಹಜರ್ ನ್ನು ಪೊಲೀಸರು ಮಾಡಿಲ್ಲ ಎಂದರೆ ಸರಿ. ಪೊಲೀಸರು ಚಿನ್ನ ಮತ್ತು ಬೆಳ್ಳಿಯನ್ನು ಎಲ್ಲಿಂದ ತಂದು ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ. ನಾನು ಪರಿಶೀಲಿಸಿದೆ ಎಂದು ಹೇಳುವ ರೀತಿಯ ಚಿನ್ನ ಮತ್ತು ಬೆಳ್ಳಿ ಎಲ್ಲ ಚಿನ್ನ ಮತ್ತು ಬೆಳ್ಳಿಯ ಅಂಗಡಿಗಳಲ್ಲಿ ಸಿಗುತ್ತದೆ ಎಂದರೆ ಸರಿ. ನಾನು ಸದರಿ ಚಿನ್ನ ಮತ್ತು ಬೆಳ್ಳಿ ಅಳತೆ ಮಾಡಿ ನೀಡಿರುವ ವರದಿಗೆ ಯಾವುದೇ ಸೀಲನ್ನು ಹಾಕಿರುವುದಿಲ್ಲ ಕೈ ಅಲ್ಲಿ ಬರೆದಿದ್ದೇನೆ ಎಂದರೆ ಸರಿ. ನಾನು ಗೋಲ್ಡ್ ಸ್ಮಿತ್ ಎಂದು ಹೇಳಲು ಯಾವುದೇ ದಾಖಲಾತಿ ಹಾಜರುಪಡಿಸಿಲ್ಲ ಎಂದರೆ ಸರಿ. ನನ್ನ ಅಂಗಡಿ ಇಲ್ಲ ಹಾಗಾಗಿ ಅದರ

ಸಂಖ್ಯೆಯನ್ನು ನೀಡಿಲ್ಲ ಎನ್ನುತ್ತಾರೆ. ನಾನು ಕೆನರಾ ಬ್ಯಾಂಕ್ ನಲ್ಲಿ ಗೋಲ್ಡ್ ಸ್ಮಿತ್ ನಲ್ಲಿ ಕೆಲಸ ಮಾಡುತ್ತೇನೆ ಎಂಬ ಬಗ್ಗೆ ದಾಖಲಾತಿ ಹಾಜರುಪಡಿಸಿಲ್ಲ ಎಂದರೆ ಸರಿ. ನಾನು ಕೆನರಾ ಬ್ಯಾಂಕ್ ನಲ್ಲಿ ಯಾವತ್ತೂ ಗೋಲ್ಡ್ ಸ್ಮಿತ್ ಆಗಿ ಕೆಲಸ ಮಾಡಿಲ್ಲ ಹಾಗೂ ನಾನು ಗೋಲ್ಡ್ ಸ್ಮಿತ್ ಅಲ್ಲ ಎಂದರೆ ಸರಿಯಲ್ಲ. ನಾನು ತರಕಾರಿ ವ್ಯಾಪಾರ ಮಾಡುತ್ತೇನೆ ಎಂದರೆ ಸರಿಯಲ್ಲ. ನಾನು ತರಕಾರಿ ಅಂಗಡಿ ನಡೆಸಲು ತೊಂದರೆ ನೀಡುತ್ತಾರೆ ಎಂಬ ಕಾರಣದಿಂದ ಪೊಲೀಸರಿಗೆ ಸಹಾಯ ಮಾಡಲು ನಾನು ಗೋಲ್ಡ್ ಸ್ಮಿತ್ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಸಾಕ್ಷಿಗೂ ಈ ಪ್ರಕರಣಕ್ಕೂ ಸಂಬಂಧವಿಲ್ಲ ಎಂದರೆ ಸರಿಯಲ್ಲ. ನಾನು ಪರಿಶೀಲನೆ ಮಾಡಿದೆ ಎಂದು ಹೇಳುವ ಸಮಯದಲ್ಲಿ ಫೋಟೋ ತಗೆದಿಲ್ಲ ಎಂದರೆ ಸರಿಯಲ್ಲ. ಪೊಲೀಸರು ನನ್ನ ಬಳಿ ಬಂದಿಲ್ಲ ನಾನು ಯಾವುದೇ ಚಿನ್ನ ಮತ್ತು ಬೆಳ್ಳಿ ಎಂದು ಪರಿಶೀಲಿಸಿಲ್ಲ ಎಂದರೆ ಸರಿಯಲ್ಲ. ದಾಖಲಾತಿಗಳನ್ನು ನಾನು ನೀಡಿದ್ದೇನೆ ಎಂದು ವರದಿಗಳನ್ನು ಈ ಪ್ರಕರಣಕ್ಕಾಗಿ ಸೃಷ್ಟಿಸಲಾಗಿದೆ ಎಂದರೆ ಸರಿಯಲ್ಲ.

ಮರುವಿಚಾರಣೆ :- - ನಾನು ಬ್ಯಾಂಕ್ ನಲ್ಲಿ ಗೋಲ್ಡ್ ಸ್ಮಿತ್ ಆಗಿ ಕೆಲಸ ಮಾಡುತ್ತೇನೆ ಎಂಬ ಬಗ್ಗೆ ದಾಖಲಾತಿ ಹಾಜರುಪಡಿಸಬಹುದು ಎಂದರೆ ಸರಿ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಖ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲಾಗಿರುತ್ತದೆ)
ಓದಿ ಹೇಳಿ ಕೇಳಿಸಿ ಸರಿ ಇದೆ ಎಂದು ಒಪ್ಪಿದೆ.

Sd/xxx-
ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ.,ಪೊನ್ನಂಪೇಟೆ.

(ಸಾಕ್ಷಿಯವರ ಸಹಿ)